ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: Court matters

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ವಾಣಿ     ದಿನಾಂಕ : DATE 20/3/2020



# ನಿರ್ಭಯಾಗೆ ನ್ಯಾಯ

ಉ.ವಾ. 20/3/20

ಅಂತೂ ಇಂತೂ ನಿರ್ಭಯಾಳಿಗೆ ನ್ಯಾಯ ಸಿಕ್ಕಂತಾಗಿದೆ. ನೇಣುಕುಣಿಕೆ ತಪ್ಪಿಸಿಕೊಳ್ಳುವ ಸಲುವಾಗಿ ಗುರುವಾರ ತಡರಾತ್ರಿ ದೆಹಲಿ ಹೈಕೋರ್ಟ್‌ಗೆ ನಿರ್ಭಯಾ ಹಂತಕರು ಸಲ್ಲಿಸಿದ್ದ ಅರ್ಜಿಯೂ ವಜಾಗೊಂಡಿದೆ. ಈ ಮೂಲಕ ಶುಕ್ರವಾರ ಬೆಳಗ್ಗೆ 5.30ಕ್ಕೆ ನಾಲ್ವರೂ ಹಂತಕರೂ ಗಲ್ಲಿಗೇರುವುದು ಫಿಕ್ಸ್ ಆಗಿದೆ. ಹೆಚ್ಚು ಕಡಿಮೆ ಶುಕ್ರವಾರ ಬೆಳಗ್ಗೆ ಈ ಪತ್ರಿಕೆ ನಿಮ್ಮ ಕೈಗೆ ಸಿಗುವ ಹೊತ್ತಿಗೆ ನಾಲ್ವರೂ ನಿರ್ಭಯಾ ಹಂತಕರೂ ನೇಣಿಗೇರಿರುತ್ತಾರೆ.

## ತಡರಾತ್ರಿ ಹೋರಾಟ

ಗುರುವಾರ ಬೆಳಗ್ಗೆ ಸುಪ್ರೀಂಕೋರ್ಟ್ ಮತ್ತು ದೆಹಲಿ ಸೆಷನ್ಸ್ ಕೋರ್ಟ್‌ಗಳಲ್ಲಿ ಪವನ್ ಮತ್ತು ಮುಕೇಶ್ ಸಲ್ಲಿಸಿದ್ದ ಅರ್ಜಿಗಳು ತಿರಸ್ಕೃತವಾದವು. ಹೀಗಾಗಿ, ಅವರ ಎಲ್ಲಾ ಕಾನೂನು ಹಾದಿಗಳು ಬಂದ್ ಆದವು. ಆದರೂ, ಗುರುವಾರ ರಾತ್ರಿ 9 ಗಂಟೆ ವೇಳೆಗೆ ಈ ಅಪರಾಧಿಗಳು ನೇಣು ಶಿಕ್ಷೆಗೆ ತಡೆ ಕೋರಿ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ತಡರಾತ್ರಿಯೇ ಅರ್ಜಿ ವಿಚಾರಣೆ ನಡೆಯಿತು. ಅಪರಾಧಿಗಳ ಪರ ವಕೀಲ ಎ.ಪಿ.ಸಿಂಗ್ ವಾದ ಮಂಡಿಸಿದರು. ಈ ವೇಳೆ ಪ್ರತಿಕ್ರಿಯೆ ನೀಡಿದ ಹೈಕೋರ್ಟ್, ಈಗಾಗಲೇ ಈ ಹಂತಕರ ಅರ್ಜಿಗಳು ಸುಪ್ರೀಂನಲ್ಲಿ ತಿರಸ್ಕೃತಗೊಂಡಿವೆ. ನಾವೀಗ ಇಲ್ಲಿ ತಡೆ ನೀಡಿದರೆ, ನ್ಯಾಯ ವ್ಯವಸ್ಥೆಯಲ್ಲಿಯೇ ಅಲ್ಲೋಲಕಲ್ಲೋಲವಾಗುತ್ತದೆ ಎಂದು ಹೇಳಿ ಅರ್ಜಿಯನ್ನು ವಜಾ ಮಾಡಿದರು.

## ಪರಿಶೀಲನೆ ಮುಕ್ತಾಯ

ನಿರ್ಭಯಾ ಪ್ರಕರಣ-ನಾಲ್ವರೂ ಹಂತಕರ ಮುಂದಿದ್ದ ಕಾನೂನಾತ್ಮಕ ಪರಿಹಾರಗಳೆಲ್ಲವೂ ಮುಗಿದಿದ್ದರಿಂದ ಗುರುವಾರ ಸಂಜೆಯೇ ದೆಹಲಿಯ ತಿಹಾರ್ ಜೈಲಿನ ಅಧಿಕಾರಿಗಳು ನೇಣಿಗೇರಿಸುವ ಎಲ್ಲಾ ಪೂರ್ವಸಿದ್ಧತೆ ಮುಗಿಸಿದರು. ಜತೆಗೆ ವಧಾಕಾರ ಪವನ್ ಜಲ್ಲಾದ್ ನಡೆಸಿದ್ದ ಸಿದ್ಧತೆಯನ್ನೂ ಪರಿಶೀಲನೆ ನಡೆಸಿದರು.

## ಅಪರಾಧಿಗಳು




## ಶಿಕ್ಷೆ ಜಾರಿ ಹೇಗೆ?

- 5.30ಕ್ಕೆ ನಾಲ್ವರೂ ಒಟ್ಟಿಗೆ ನೇಣುಗಂಬಕ್ಕೆ
- ಅಪರಾಧಿಗೆ ನೇಣುಗಂಬ ತೋರಿಸುವುದಿಲ್ಲ
- ಅರ್ಧ ತಾಸು ನೇಣುಗಂಬದಲ್ಲೇ
- ವೈದ್ಯಕೀಯ ಅಧಿಕಾರಿಯಿಂದ ಸಾವು ದೃಢ

## ಪ್ರಕರಣ ಬಾಕಿಯಿಲ್ಲ

ನಿರ್ಭಯಾ ಅಪರಾಧಿಗಳಿಗೆ ಸಂಬಂಧಿಸಿದ ಯಾವುದೇ ಅರ್ಜಿಯು, ದೇಶದ ಯಾವುದೇ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿಲ್ಲ. ಅಪರಾಧಿಗಳಾದ ಅಕ್ಷಯ್ ಕುಮಾರ್ ಸಿಂಗ್ ಹಾಗೂ ಪವನ್ ಕುಮಾರ್ ಗುಪ್ತಾ ಅವರು ಸಲ್ಲಿಸಿದ್ದ ತಮ್ಮ 2ನೇ ಕ್ಷಮಾದಾನ ಅರ್ಜಿಯೂ ರಾಷ್ಟ್ರಪತಿಯವರಿಂದ ವಜಾಗೊಳ್ಳಲ್ಪಟ್ಟಿದೆ. ಹಾಗಾಗಿ, ತಮ್ಮ ಗಲ್ಲು ಶಿಕ್ಷೆಯಿಂದ ಪಾರಾಗಲು ಅಪರಾಧಿಗಳ ಮುಂದಿದ್ದ ಎಲ್ಲಾ ಕಾನೂನಾತ್ಮಕ ದಾರಿಗಳು ಮುಚ್ಚಲ್ಪಟ್ಟಿವೆ ಎಂದು ಸರ್ಕಾರಿ ಪರ ವಕೀಲರು, ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಗುರುವಾರ ತಿಳಿಸಿದ್ದಾರೆ.

## ತಲೆತಿರುಗಿ ಬಿದ್ದ ಅಕ್ಷಯ್ ಪತ್ನಿ

ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಗಲ್ಲು ಶಿಕ್ಷೆಗೆ ತಡೆಯಾಜ್ಞೆ ನೀಡುವುದನ್ನು ಗುರುವಾರ ನಿರಾಕರಿಸಿ ತೀರ್ಪು ಹೊರಡಿಸಿದ ಬೆನ್ನಲ್ಲೇ ಅಪರಾಧಿ ಅಕ್ಷಯ್ ಕುಮಾರ್ ಸಿಂಗ್‌ನ ಪತ್ನಿ ಪುನೀತಾ ದೇವಿ ಕೋರ್ಟ್‌ನ ಆವರಣದಲ್ಲೇ ತಲೆತಿರುಗಿ ಬಿದ್ದರು. ಇತ್ತೀಚೆಗಷ್ಟೇ ಈಕೆ ಬಿಹಾರದ ಕುಟುಂಬ ನ್ಯಾಯಾಲಯದಲ್ಲಿ ಅಕ್ಷಯ್ ಸಿಂಗ್‌ನಿಂದ ವಿಚ್ಛೇದನ ಕೊಡಿಸುವಂತೆ ಅರ್ಜಿ ಸಲ್ಲಿಸಿದ್ದರು.